ಗ್ರಾಮ ಪಂಚಾಯಿತಿಗಳ ಆರ್ಥಿಕ ಸುಧಾರಣೆ

1437(1991); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಗ್ರಾಮ ಪಂಚಾಯತಿಗಳ ಆರ್ಥಿಕ ಸುಧಾರಣೆಗಾಗಿ ಸರ್ಕಾರದ ನೆರವು ಮತ್ತು ಮಾರ್ಗಸೂಚಿಗಳ ಕುರಿತಾದ ವಿವರಗಳೇನು;

ಆ) ಗ್ರಾಮ ಪಂಚಾಯತಿಗಳ ಲೆಕ್ಕ ಪತ್ರಗಳ ಪರಿಶೋಧನೆಯನ್ನು ಸರ್ಕಾರ ಕೈಗೊಳ್ಳುವ ಮೂಲಕ ಗುರುತಿಸಲಾದ ಲೋಪದೋಷಗಳು ಮತ್ತು ಆರ್ಥಿಕ ದುರ್ಬಳಕೆ ಕುರಿತಾದ ವಿವರಗಳೇನು;

ಇ) ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಯಾವುದೇ ಅವ್ಯವಹಾರಗಳು ಮತ್ತು ಸರ್ಕಾರದ ಪ್ರಯೋಜನೆಗಳ ಅನುಷ್ಠಾನದಲ್ಲಿ ಕುಂದುಕೊರತೆಗಳು ಆಗದಂತೆ ಮಾಡಲು ಸರ್ಕಾರ ಕೈಗೊಂಡಿರುವ ಪರಿಣಾಮಕಾರಿ ಕ್ರಮಗಳೇನು?

ಶ್ರೀ ಹೆಚ್.ಕೆ ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಕರ್ನಾಟಕ ಪಂ.ರಾಜ್ ಅಧಿನಿಯಮ 1993 ರ ಪ್ರಕರಣ 199 ಹಾಗೂ ಅದರಡಿಯಲ್ಲಿ ರಚಿಸಲಾದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಯ ತೆರಿಗೆಗಳು ಮತ್ತು ಫೀಜುಗಲು) ನಿಯಮಗಳು 1994 ರನ್ವಯ ಗ್ರಾಮ ಪಂಚಾಯತಿಗಳು ಸ್ವತ್ತಿನ ಮೇಲೆ, ಕೃಷಿಕರ ನಿರ್ಧರಣೆಗೆ ಒಳಪಟ್ಟಿಲ್ಲದಿರುವ ಭೂಮಿಗಳ ಮೇಲೆ, ಮನೋರಂಜನಾ ತೆರಿಗೆ, ವಾಹನ ತೆರಿಗೆ, ಬಸ್ಸು ನಿಲ್ದಾಣಗಳ ಮೇಲೆ, ಫೀಜು, ಮಾರುಕಟ್ಟೆಗಳ ಮೇಲೆ ಫೀಜು, ಜಾಹಿರಾತು ಅಥವಾ ಜಾಹೀರಾತು ಪ್ರಕಟಣಾ ಫಲಕಗಳ ಮೇಲೆ ತೆರಿಗೆ ಮತ್ತು ಜಾನುವಾರುಗಳ ನೋಂದಣಿಗೆ ಫೀಜು ವಿಧಿಸಬಹುದಾಗಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಯ ತೆರಿಗೆಗಳು ಮತ್ತು ಫೀಜುಗಳು)

ನಿಯಮಗಳು, 1994 ರನ್ವಯ ಗ್ರಾಮ ಪಂಚಾಯತಿಗಳು ಪ್ರತಿ 4 ವರ್ಷಗಳಿಗೊಮ್ಮೆ ತೆರಿಗೆ ಪರಿಷ್ಕರಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಇದಲ್ಲದೆ ಜನಸಂಖ್ಯೆ ಆಧಾರದ ಮೇಲೆ ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಅನುದಾನ, 13ನೇ ಹಣಕಾಸು ಆಯೋಗದ ಅನುದಾನ ಮತ್ತು ಕುಡಿಯುವ ನೀರು ಸರಬರಾಜು ಕಾರ್ಯಕ್ರಮ, ನಿರ್ಮಲ ಭಾರತ ಅಭಿಯಾನ, ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಆಯಾ ಯೋಜನೆಗಳಿಗೆ ಪ್ರತ್ಯೇಕ ಮಾರ್ಗಸೂಚಿಗಳು ಇರುತ್ತವೆ.

ಆ) ಲೆಕ್ಕಪತ್ರಗಳ ಪರಿಶೋಧನೆಯನ್ನು ಕೈಗೊಳ್ಳುವ ಮೂಲಕ ಗುರುತಿಸಲಾದ ಲೋಪದೋಷಗಳ ವಿವರಗಳನ್ನು ಅನುಬಂಧ–1 ರಲ್ಲಿ ಮತ್ತು ಆರ್ಥಿಕ ದುರ್ಬಳಕೆ ಕುರಿತಾದ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರ ನಿಯಮ 113 ರಂತೆ ಲೆಕ್ಕ ಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಲಾದ ಲೋಪದೋಷಗಳು ಅಥವಾ ಅಕ್ರಮಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳತಕ್ಕದ್ದು ಮತ್ತು ನಷ್ಟಕ್ಕೆ ಯಾರು ಹೊಣೆಗಾರರಾಗಿದ್ದರೂ ಅಂತಹವರಿಂದ ಹಣವನ್ನು ವಸೂಲಿ ಮಾಡಲು ತುರ್ತು ಕ್ರಮವನ್ನು ಕೈಗೊಳ್ಳಲಾಗುವುದು. ಯಾವುದೇ ವಸೂಲಿ ಅಥವಾ ಬಾಕಿ ಉಳಿದಕೊಂಡಿರುವ ಆಕ್ಷೇಪಣೆಗಳಿಗೆ ಗ್ರಾಮ ಪಂಚಾಯತಿಯು

ಸಮರ್ಪಕ ಕ್ರಮ ಕೈಗೊಳ್ಳದಿದ್ದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಅಧಿನಿಯಮದ ಪ್ರಕರಣ 246 ರ ಉಪ ಪರಕ್ರರಣಗಳು (7) ಮತ್ತು (8) ರಂತೆ ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಲೆಕ್ಕ ಪತ್ರ ಮತ್ತು ದಾಖಲೆಗಳನ್ನು ಹಾಜರು ಪಡಿಸದೆ ಇದ್ದಂತಹ ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆ ವ್ಯವಸ್ಥಿತವಾಗಿ ನಡೆಯಲು ಅಡಚಣೆ ಉಂಟಾಗಿರುವ ಬಗ್ಗೆ ಕಾಲ ಕಾಲಕ್ಕೆ ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಲಾಗುತ್ತಿದೆ.

ಇ) ಗ್ರಾಮ ಪಂಚಾಯತಿ ಮಟ್ಟದಲ್ಲಿ ನೌಕರರು ಕರ್ತವ್ಯ ಲೋಪ ಎಸಗಿದರೆ ಕರ್ನಾಟಕ ಸಿವಿಲ್ ಸೇವೆ (ಸಿಸಿಎ) ನಿಯಮಗಳು, 1957 ರನ್ವಯ ಶಿಸ್ತು ಕ್ರಮ ಜರುಗಿಸಬಹುದಾಗಿದೆ. ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಅವ್ಯವಹಾರ ನಡೆಸಿದರೆ ಕರ್ನಾಟಕ ಪಂ.ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ಹಾಗೂ 48(5) ರನ್ವಯ ದುರ್ವತನೆಗಾಗಿ ಸದಸ್ಯರನ್ನು ತೆಗೆದುಹಾಕಬಹುದಾಗಿದೆ ಹಾಗೂ ಪ್ರಕರಣ 246 (8)ರಂತೆ ದುರುಪಯೋಗಪಡಿಸಿಕೊಂಡಿರುವ ಮೊತ್ತವನ್ನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು ಶೇ 15 ರಷ್ಟು ಬಡ್ಡಿ ಸಹಿತ ವಸೂಲಿ ಮಾಡಬಹುದಾಗಿದೆ.

ಅನುಬಂಧ–1

ಗ್ರಾಮ ಪಂಚಾಯಿತಿಗಳ ಲೆಕ್ಕ ಪತ್ರಗಳ ಪರಿಶೋಧನೆಯನ್ನು ಕೈಗೊಳ್ಳುವ ಮುಲಕ ಗುರುತಿಸಲಾದ ಲೋಪದೋಷಗಳ ವಿವರಗಳು.

1. ಎಲ್ಲಾ ಗ್ರಾಮ ಪಂಚಾಯ್ತಿಗಳು ಸರ್ಕಾರದ ಪರವಾಗಿ ವಸೂಲಿಸಿರುವ ಆರೋಗ್ಯ, ಶಿಕ್ಷಣ ಮತ್ತು ಗ್ರಂಥಾಲಯ ಉಪಕರಗಳನ್ನು ಸರ್ಕಾರಿ ಲೆಕ್ಕಕ್ಕೆ ಜಮಾ ಮಾಡದಿರುವುದು.

2. ಎಲ್ಲಾ ಗ್ರಾಮ ಪಂಚಾಯ್ತಿಗಳು ಸರ್ಕಾರದ ಪರವಾಗಿ ವಸೂಲಿಸಿರುವ ಮಾರಾಟ ತೆರಿಗೆ, ರಾಜಧನ, ಆದಾಯ ತೆರಿಗೆ ಇತ್ಯಾದಿಗಳನ್ನು ಸರ್ಕಾರಿ ಲೆಕ್ಕಕ್ಕೆ ಜಮಾ ಮಾಡದಿರುವುದು.

3. ಎಲ್ಲಾ ಗ್ರಾಮ ಪಂಚಾಯ್ತಿಗಳು ಅಂದಾಜು ಪತ್ರಿಕೆಗೆ ನಿಗಧಿತ ಅವಧಿಯೊಳಗೆ ಮಂಜೂರಾತಿ ಪಡೆಯದಿರುವುದು.

4. ಎಲ್ಲಾ ಗ್ರಾಮ ಪಂಚಾಯ್ತಿಗಳು ಅನುಮೋದಿತ ಆಯವ್ಯಯಕ್ಕಿಂತ ಹೆಚ್ಚಿಗೆ ವೆಚ್ಚ ಮಾಡಿರುವುದು.

5. ಜೋಡಿ ನಮೂದು ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವುದು.

6. ಎಲ್ಲಾ ಗ್ರಾಮ ಪಂಚಾಯ್ತಿಗಳ ವಾರ್ಷಿಕ ಲೆಕ್ಕಪತ್ರಗಳಾದ ಸ್ವೀಕೃತಿ ಮತ್ತು ಪಾವತಿ, ಆದಾಯ ಮತ್ತು ವೆಚ್ಚದ ಲೆಕ್ಕ ಹಾಗೂ ಸಮತೋಲನಾ ಪಟ್ಟಿಯನ್ನು ನಿರ್ವಹಿಸದಿರುವುದು.

7. ಜಮಾ ಮತ್ತು ಖರ್ಚಿನ ವರ್ಗೀಕೃತ ವಹಿಯನ್ನು ನಿರ್ವಹಿಸದಿರುವುದು.

8. ನಗದು ಪುಸ್ತಕದಲ್ಲಿನ ಆಖ್ಯೈರು ಶಿಲ್ಕಿಗೂ ಖಜಾನೆ/ಬ್ಯಾಂಕ್‌ಗಳ ಶೆಡ್ಯೂಲ್‌ಗಳಲ್ಲಿನ ಆಖ್ಯೈರು ಶಿಲ್ಕಿಗೂ ಲೆಕ್ಕ ಸಮನ್ವಯ ಮಾಡದಿರುವುದು.

9. ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿನ ಸಿಬ್ಬಂದಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ ನೇಮಕ ಮಾಡಿರುವುದು.

10. ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಸಿಬ್ಬಂದಿಗಳ ಶ್ರೇಣಿ ವಹಿ ನಿರ್ವಹಿಸದಿರುವುದು.

11. ಎಲ್ಲಾ ಗ್ರಾಮ ಪಂಚಾಯ್ತಿಗಳ ಸಿಬ್ಬಂದಿ ವೆಚ್ಚ ವಾರ್ಷಿಕ ಆದಾಯದ ಶೇಖಡಾ 40 ಮೀರಿರುವ ಪ್ರಕರಣಗಳು.

12. ಎಲ್ಲಾ ಗ್ರಾಮ ಪಂಚಾಯ್ತಿಗಳು ನಿರ್ವಹಿಸುವ ಕಾಮಗಾರಿಗಳ ವಿವರದ ವಹಿ ನಿರ್ವಹಿಸದಿರುವುದು.

13. ಕಾಮಗಾರಿಗಳ ಅಂದಾಜು ಪಟ್ಟಿ ಮತ್ತು ಅಳತೆ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

14. ಗುತ್ತಿಗೆದಾರರು ಮತ್ತು ಸಾಮಗ್ರಿ ಪೂರೈಕೆದಾರರು ಕ್ರಾಸ್ ಚೆಕ್ ಮೂಲಕ ಪಾವತಿಸದೆ ನಗದು ರೂಪದಲ್ಲಿ ಪಾವತಿಸಿರುವುದು.

15. ಗುತ್ತಿಗೆದಾರರು ಬಿಲ್ಲಿನಲ್ಲಿ ಸರ್ಕಾರ ನಿಗದಿಪಡಿಸಿದ ಶೇಖಡಾವಾರು ಆದಾಯ ತೆರಿಗೆ, ಮಾರಾಟ ತೆರಿಗೆ, ರಾಜಧನವನ್ನು ಕಡಿತಗೊಳಿಸದಿರುವುದು ಹಾಗೂ ಸರ್ಕಾರದ ಲೆಕ್ಕ ಶೀರ್ಷಿಕೆ ಜಮಾ ಮಾಡದಿರುವುದು.

16. ಎಲ್ಲಾ ಗ್ರಾಮ ಪಂಚಾಯ್ತಿಗಳು ಹೊಂದಿರುವ ಚರ ಮತ್ತು ಸ್ಥಿರಾಸ್ತಿ ವಹಿಯನ್ನು ನಿರ್ವಹಿಸದಿರುವುದು ಹಾಗೂ ಭೌತಿಕ ಪರಿಶೀಲನೆ ಮಾಡಿ ಪ್ರಮಾಣೀಕರಿಸಿರುವುದು.

17. ನಿವೇಶನ ಮಾರಾಟ ಮತ್ತು ಗ್ರಾಮ ಪಂಚಾಯ್ತಿ ಸ್ವತ್ತುಗಳ ವರ್ಗಾವಣೆ ಬಗ್ಗೆ ದಾಖಲೆಗಳನ್ನು ನಿರ್ವಹಿಸದಿರುವುದು ಹಾಗೂ ಲೆಕ್ಕಪರಿಶೋಧನೆಗೆ ಒದಗಿಸದಿರುವುದು.

18. ಎಲ್ಲಾ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯ ನಿವೇಶನಾ ಮನೆ ಮತ್ತು ಕಂದಾಯದ ಎಲ್ಲಾ ಡಿ.ಸಿ.ಬಿ ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸದಿರುವುದು.

19. ಎಲ್ಲಾ ಗ್ರಾಮ ಪಂಚಾಯ್ತಿಗಳು ನಿರ್ವಹಿಸುವ ವಿವಿಧ ಯೋಜನೆಗಳ ಪಟ್ಟಿಯನ್ನು ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದಿರುವುದು.

20. ಎಲ್ಲಾ ಗ್ರಾಮ ಪಂಚಾಯ್ತಿಗಳು ಖರೀದಿಸುತ್ತಿರುವ ಬೋರ್‌ವೆಲ್ ಮತ್ತು ಮೋಟರ್ ರಿಪೇರಿ ಉಪಕರಣಗಳ ಪಾರದರ್ಶಕ ನಿಯಮಗಳ ಪ್ರಕಾರ ಖರೀದಿಸದೇ ಇರುವುದು.

21. ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿರುವ ಹಳೆಯ ಬೋರ್‌ವೆಲ್, ಮೋಟರ್ ರಿಪೇರಿ ಸಾಮಗ್ರಿಗಳು, ವಿದ್ಯುತ್ ಉಪಕರಣಗಳ ಇತ್ಯಾದಿ ಅನುಪಯುಕ್ತ ಸಾಮಗ್ರಿಗಳ ದಾಸ್ತಾನು ಸಹಿ ನಿರ್ವಹಿಸದಿರುವುದು.

22. ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು.

ಅನುಬಂಧ–2

ಗ್ರಾಮ ಪಂಚಾಯಿತಿಗಳ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವ ಆರ್ಥಿಕ ದುರ್ಬಳಕೆ ಕುರಿತಾದ ವಿವರಗಳು

(₹ ಲಕ್ಷಗಳಲ್ಲಿ)

ಕ್ರ.ಸಂ.	ಜಿಲ್ಲೆ	ದುರುಪಯೋಗದ ಮೊತ್ತ
1	2	3
1	ಬೆಂಗಳೂರು	20.37
2	ಬಾಗಲಕೋಟೆ	0.10
3	ಬೆಳಗಾಂ	0.73

4	ಬಳ್ಳಾರಿ	0.87
5	ಬೀದರ್	9.99
6	ಬಿಜಾಪುರ	0.65
7	ಚಿಕ್ಕಮಗಳೂರು	2.65
8	ಚಿಕ್ಕಬಳ್ಳಾಪುರ	1.43
9	ಚಿತ್ರದುರ್ಗ	18.23
10	ಚಾಮರಾಜನಗರ	6.74
11	ದಾವಣಗೆರೆ	6.17
12	ಗುಲ್ಬರ್ಗ	7.10
13	ಹಾಸನ	11.77
14	ಹಾವೇರಿ	3.45
15	ಕೋಲಾರ	0.60
16	ಕೊಪ್ಪಳ	1.42
17	ಕೊಡಗು	2.17
18	ಮಂಡ್ಯ	10.90
19	ಮಂಗಳೂರು	0.02
20	ಮೈಸೂರು	25.35
21	ರಾಯಚೂರು	6.31
22	ರಾಮನಗರ	7.73
23	ಶಿವಮೊಗ್ಗ	4.32
24	ತುಮಕೂರು	19.50
25	ಉಡುಪಿ	3.41
26	ಯಾದಗೀರ್	3.64
	ಒಟ್ಟು	175.52

(ಮೇಲ್ಕಾಣಿಸಿರುವ ವಿವರಗಳು 2009–10ನೇ ಸಾಲಿಗೆ ಸಂಬಂಧಪಟ್ಟಿರುತ್ತವೆ)